ವಿಷಯ : ಬೆಳಗಾವಿ ವಿಭಾಗದಲ್ಲಿ ಸಕ್ಕರೆ ಕಾರ್ಖಾನೆಗಳ ಪ್ರಾರಂಭ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 200(1292)

ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಬೆಳಗಾವಿ ವಿಭಾಗದಲ್ಲಿ ಹಲವಾರು ಸಕ್ಕರೆ ಕಾರ್ಖಾನೆಗಳಿದ್ದರೂ ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುವ ಪ್ರಸಂಗ ಬಂದಿರುವುದರಿಂದ ಪರ್ಯಾಯ ವ್ಯವಸ್ಥೆಯ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೆ?

ಆ. ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ?

ಇ. ಹಾಗಿದ್ದರೆ, 1995-96ನೇ ಸಾಲಿನಲ್ಲಿ ಪ್ರಾರಂಭವಾಗುವ ಕಾರ್ಖಾನೆಗಳೆಷ್ಟು?

ಈ. ಈಗಿದ್ದ ಕಾರ್ಖಾನೆಗಳ ಕಬ್ಬು ನುರಿಯುವ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ಬಂದ ಬೇಡಿಕೆಗಳು ಎಷ್ಟು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು):

ಅ. ಹೌದು.

ಆ. ಮೂರು.

ಇ. ಒಂದು.

ಈ. ಆರು.

ಶ್ರೀ ಚಂದ್ರಶೇಖರ ನಾಯಕ : ಮಾನ್ಯ ಸಭಾಧ್ಯಕ್ಷರೇ, ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅವ್ಯವಸ್ಥೆ ಯಾವ ರೀತಿ ಇದೆ ಎಂದರೆ ಈಗಾಗಲೇ ಮಹಾರಾಷ್ಟ್ರಕ್ಕೆ ಕಬ್ಬು ಸಾಗುತ್ತಾ ಇದೆ. ಕೆಲವು ಏಜೆಂಟರು ಟನ್ನಿಗೆ 550 ರೂಪಾಯಿಗಳಂತೆ ಖರೀದಿ ಮಾಡಿ ಅದನ್ನು ಲಾಭದಾಯಕವಾಗಿ ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದಾರೆ. ಆದರ ಬಗ್ಗೆ ಸರ್ಕಾರ ಏನು ಮಾಡಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಪಿ. ಸಿ. ಸಿದ್ದನಗೌಡರ್ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಹೆಚ್ಚಾಗಿ ಇರುವುದರಿಂದ ಅದನ್ನು ಮಹಾರಾಷ್ಟ್ರಕ್ಕೆ ಕಳುಹಿಸಲಿಕ್ಕೆ ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಆ ರೀತಿ ಕಬ್ಬು ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಮಧ್ಯದಲ್ಲಿ ಯಾರೋ ಏಜೆಂಟರು ಕಮೀಷನ್ ಹೊಡೆಯುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಯಾರಾದರೂ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಚಂದ್ರಶೇಖರ ನಾಯಕ : ಜಿಲ್ಲೆಯಲ್ಲಿ 3 ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ದೊರತಿವೆ. ಈಗಾಗಲೇ ಎಡದಂಡೆ ಕಾಲುವೆ ಪ್ರಾರಂಭವಾಗಿರುವುದರಿಂದ ಕಬ್ಬು ಹೆಚ್ಚಾಗಿ ಇರುವುದು ಗೊತ್ತಿದೆ ಬಲದಂಡೆ ಕಾಲುವೆ ಇನ್ನೂ ಪ್ರಾರಂಭ ಆಗಿಲ್ಲ. ಬಲದಂಡೆ ಕಾಲುವೆ ಪ್ರಾರಂಭವಾದರೆ ಇದರ ಎರಡು ಪಟ್ಟು ಕಬ್ಬು ಹೆಚ್ಚಾಗುತ್ತದೆ. ಆದರ ಮುಂದಿನ ಭವಿಷ್ಯದ ಸಲುವಾಗಿ ಸರ್ಕಾರ ಏನು ಮಾಡಿದೆ ಎಂದು ಕೇಳುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್ : ಸನ್ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ 6 ಸಕ್ಕರೆ ಕಾರ್ಖಾನೆಗಳನ್ನು ವಿಸ್ತರಣೆ ಮಾಡುವ ಸಲುವಾಗಿ ಒಂದು ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಲಾಗಿದೆ. ಅದರ ಜೊತೆಗೆ 3 ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಸಿಕ್ಕಿದೆ. ಒಂದು ಸಕ್ಕರೆ ಕಾರ್ಖಾನೆ ಈ ವರ್ಷ ಪ್ರಾರಂಭ ಆಗುತ್ತದೆ. ಕೇಂದ್ರ ಸರ್ಕಾರದಲ್ಲಿ ಇನ್ನೂ ಅನೇಕ ಪ್ರಸ್ತಾವನೆಗಳು ಪೆಂಡಿಂಗ್ ಇವೆ. ಈಗಾಗಲೇ ನಾನು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇನೆ, ಮತ್ತು ನಾನು ಇನ್ನೂ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಚಂದ್ರಶೇಖರ ನಾಯಕ : ಈಗಾಗಲೇ ಎಂ. ಕೆ. ಹುಬ್ಬಳ್ಳಿ ಕಾರ್ಖಾನೆಯಲ್ಲಿ 40 ಟನ್ ಮಾತ್ರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ -- ಹೆಚ್ಚು ಕಬ್ಬನ್ನು ಮಾರಾಟ ಮಾಡಬೇಕು ಎಂದರೆ ಏರಡನೇ ಕಡೆ ಹೋಗಬೇಕು. ಅದರ ಸಲುವಾಗಿ ಹೆಚ್ಚಾದಂಥ ಕಬ್ಬನ್ನು ಯಾವ ರೀತಿ ಸಾಗಿಸಬೇಕು ಅಥವಾ ಅದರ ಉಪಯೋಗ ಯಾವ ರೀತಿ ತೆಗೆದುಕೊಳ್ಳಬೇಕು ಎನ್ನುವ ಯೋಚನೆಗೆ ಈಡಾಗಿದ್ದಾರೆ. ಆದ್ದರಿಂದ ಸರ್ಕಾರದವರು ಕಬ್ಬು ತೆಗೆದುಕೊಳ್ಳುವ ಕಡೆ ಹೆಚ್ಚು ಗಮನ ಕೊಡಬೇಕು ಮತ್ತು ಕಬ್ಬು ಅರೆಯುವ ಸಾಮರ್ಥ್ಯವನ್ನು ಎಂ.ಕೆ.ಹುಬ್ಬಳ್ಳಿ ಕಾರ್ಖಾನೆಯಲ್ಲಿ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್ : ಈಗಾಗಲೇ ನಾನು ಹೇಳಿದ ಹಾಗೆ ಮೂರು ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ. ಎಂ. ಕೆ. ಹುಬ್ಬಳ್ಳಿ ಕಾರ್ಖಾನೆಯವರು ಬೇಕೆಂದರೆ ಅವರಿಗೂ ಕೂಡ ಕೊಡುತ್ತೇವೆ. ಈ ವರ್ಷ ಕಬ್ಬು ಹೆಚ್ಚು ಇದ್ದುದ್ದರಿಂದ ಮಹಾರಾಷ್ಟ್ರಕ್ಕೆ ಕಳುಹಿಸಿದ್ದೇವೆ.

ಶ್ರೀ ವಿ. ಎಸ್. ಕೌಜಲಗಿ : ಮಾನ್ಯ ಮಂತ್ರಿಗಳು ಹೇಳಿದರು, ಕಬ್ಬು ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚು ಬೆಳೆಯುತ್ತಾರೆ ಮತ್ತು ಅದು ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಪರವಾನಗಿಯನ್ನು ಕೊಟ್ಟಿದ್ದೇವೆಂದು. ತಾವು ಇದನ್ನು ವಿಚಾರ ಮಾಡಿ ಹೊಸ ಕಾರ್ಖಾನೆಗಳನ್ನು ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಎರಡನೆಯಾದಾಗಿ, ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ, ಈ ಕಾರ್ಖಾನೆಯಲ್ಲಿ ಎಷ್ಟು ಮಂದಿ ಶೇರ್‌ಹೋಲ್ಡರ್ಸ್ ಇದ್ದಾರೆ, ಅವರು ಬೆಳೆದಂಥ ಕಬ್ಬನ್ನು ಕಡ್ಡಾಯವಾಗಿ ನಿಲ್ಲಿಸದಂತೆ ಆದೇಶವನ್ನು ತಾವು ಕೊಡುತ್ತೀರಾ ?

ಶ್ರೀ ಪಿ.ಸಿ. ಸಿದ್ದನಗೌಡರ್ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಈ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಸದಸ್ಯರ ಒಂದು ಲೆಕ್ಕಾಚಾರ ಹಾಕಿ ಯಾವಯಾವ ಸದಸ್ಯರಿಗೆ ಎಷ್ಟೆಷ್ಟು ಕಬ್ಬು ತೆಗೆದುಕೊಳ್ಳಬೇಕು ಎನ್ನುವುದು ತಮಗೂ ಕೂಡ ಗೊತ್ತಿದೆ. ಅದರಲ್ಲಿ ನಾನು ಹೆಚ್ಚು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ರಿಸರ್ವ್ ಏರಿಯಾ ಎಂದು ಮಾಡಿರುತ್ತಾರೆ. ಆ ಪ್ರಕಾರ ಅವರು ಮಾಡುತ್ತಾರೆ. ಹೆಚ್ಚಿನ ಸಕ್ಕರೆ ಕಾರ್ಖಾನೆ ಬಗ್ಗೆ ತಾವು ಹೇಳಿದಿರಿ. ಕೇಂದ್ರಸರ್ಕಾರದಲ್ಲಿ ಕರ್ನಾಟಕದ ಬಗ್ಗೆ ಅಲಕ್ಷ್ಯ ಬಹಳ ಇದೆ. ನಮ್ಮ ಮುಖ್ಯಮಂತ್ರಿಗಳು ಕೂಡ ಈಗಾಗಲೇ ಹೇಳಿದ್ದಾರೆ. ಸರ್ಕಾರಕ್ಕೆ ಒತ್ತಾಯ ಮಾಡಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ನಮ್ಮ ರಾಜ್ಯದಲ್ಲಿ 2 ಕೋಟಿ 15 ಲಕ್ಷ ಟನ್ ಕಬ್ಬನ್ನು ತಾವು ಬೆಳೆಯುತ್ತೇವೆ. ಕಾರ್ಖಾನೆಗಳಿಗೆ ಉಪಯೋಗಿಸುತ್ತಾ ಇರತಕ್ಕ ಕಬ್ಬು

ನಲವತ್ತೆಂಟೇ ಪರ್ಸೆಂಟು. ನಾವು ನಮ್ಮ ರಾಜ್ಯದಲ್ಲಿ ಬೆಳೆಯತಕ್ಕ ಕಬ್ಬನ್ನು 50 ಭಾಗವನ್ನೂ ಕೂಡ ನಾವು ಸಕ್ಕರೆ ಕಾರ್ಖಾನೆಯಲ್ಲಿ ಉಪಯೋಗಿಸಿಕೊಳ್ಳುತ್ತಿಲ್ಲ ಬಾಕಿಯದೆಲ್ಲಾ ಬೆಲ್ಲಕ್ಕೆ ಮತ್ತೊಂದಕ್ಕೆ ಹೋಗುತ್ತಿದೆ. ನಮ್ಮದೊಂದು ಸ್ಕ್ರೀನಿಂಗ್ ಕಮಿಟಿ ಇದೆ ರಾಜ್ಯ ಮಟ್ಟದಲ್ಲಿ. ಆ ಸ್ಕ್ರೀನಿಂಗ್ ಕಮಿಟಿ ಮುಂದೆ ಎಷ್ಟು ಅರ್ಜಿಗಳಿವೆ ? ಆ ಅರ್ಜಿಗಳನ್ನು ಎಷ್ಟು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ ? ಕೇಂದ್ರ ಸರ್ಕಾರದಲ್ಲಿ ಹೊಸ ಕಾರ್ಖಾನೆ ತರುವುದಕ್ಕೆ ಏನು ಪ್ರಯತ್ನ ನಡೆದಿದೆ ಎಂಬುದನ್ನು ದಯವಿಟ್ಟು ತಾವು ತಿಳಿಸುತ್ತೀರಾ ?

ಶ್ರೀ ಪಿ. ಸಿ. ಸಿದ್ದನಗೌಡರ್ : ಹಿರಿಯ ಸದಸ್ಯರಾದ ನಾಗೇಗೌಡರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ಕ್ರೀನಿಂಗ್‌ಕಮಿಟಿಗೆ ಈಗಾಗಲೇ 15 ಅಪ್ಲಿಕೇಷನ್ ಬಂದಿವೆ. ಅವರು ಹೇಳಿದಹಾಗೆ 100ಕ್ಕೆ 30ರಷ್ಟು ಕಬ್ಬು ನಮಗೆ ಹೆಚ್ಚಾಗಿದೆ. ಅಂದರೆ ನಾವು ಬೆಳೆಯತಕ್ಕ ಕಬ್ಬು ಮತ್ತು ಅರೆಯತಕ್ಕ ಕಬ್ಬನ್ನು ಅಂಕಿಸಂಖ್ಯೆ ಪ್ರಕಾರ ನೋಡಿದರೆ 30 ಪರ್ಸೆಂಟ್ ಹೆಚ್ಚಾಗಿದೆ. ಇದು ಮಹಾರಾಷ್ಟ್ರಕ್ಕೆ ಹೋಗಿರಬಹುದು, ಗೋವಾಕ್ಕೆ ಹೋಗಿರಬಹುದು ಅಥವಾ ಬೇರೆ ರಾಜ್ಯಕ್ಕೆ ಹೋಗಿರಬಹುದು. ಕೇಂದ್ರ ಸರ್ಕಾರದಲ್ಲಿ ಆಗಾಗಲೇ ನಾನು ಹೇಳಿದಹಾಗೆ ಸದನದ ಎಲ್ಲಾ ಸದಸ್ಯರ ಸಹಕಾರವನ್ನು ತೆಗೆದುಕೊಂಡು, ಮಾನ್ಯ ಮುಖ್ಯಮಂತ್ರಿಗಳು ಕೂಡ ಈಗಾಗಲೇ ಹೇಳಿದ್ದಾರೆ.

ನಾನೂ ಕೂಡ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ. ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಲ್ಲಿ ನಮಗೆ ಸ್ವಲ್ಪ ಅನ್ಯಾಯ ಆಗುತ್ತಿದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಮಹಾರಾಷ್ಟ್ರ ಮತ್ತು ಗುಜರಾತಿಗೆ ಕೊಟ್ಟಷ್ಟು ನಮಗೆ ಕೊಡುವುದಿಲ್ಲ. ಈಗಾಗಲೇ 6 ಅಪ್ಲಿಕೇಷನ್‌ಗಳು ಪೆಂಡಿಂಗ್ ಇವೆ. ನಮ್ಮ ಮುಂದೆ 15 ಇವೆ. ರಾಜ್ಯದ ಎಲ್ಲಾ ಕಾರ್ಖಾನೆಗಳ ಅಧ್ಯಕ್ಷರು ಮತ್ತು ಎಂ. ಡಿ. ಗಳನ್ನು ಕರೆದಿದ್ದೇನೆ. ಅಲ್ಲಿ ಅನೇಕ ವಿಚಾರಗಳ ಬಗ್ಗೆ ನಿರ್ಣಯ ಮಾಡಿ ತಮ್ಮ ಗಮನಕ್ಕೆ ನಾನು ತರುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 201 : (725)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅವುಗಳ ಹೆಸರುಗಳೇನು ? (ವಿವರಗಳನ್ನು ಒದಗಿಸುವುದು)

ಆ. ಈ ಕೈಗಾರಿಕೆಗಳಿಗೆ ಸರ್ಕಾರದವರು ಸಾಲದ ರೂಪದಲ್ಲಿ ನೀಡಿರುವ ಹಣ ಎಷ್ಟು ? ಈ ಹಣದ ಮರುಪಾವತಿಯು ಸರಿಯಾಗಿ ಆಗಿದೆಯೇ ಇಲ್ಲವಾದಲ್ಲಿ ಬಾಕಿಯಿರುವ ಹಣದ ಮೊತ್ತವೆಷ್ಟು ?

ಇ. ಈ ಕೈಗಾರಿಕೆಗಳು ವ್ಯವಸ್ಥಿತವಾಗಿ ನಡೆಯುತ್ತಿವೆಯೇ, ಇದರಲ್ಲಿ ರೋಗಗ್ರಸ್ಥ ಕೈಗಾರಿಕೆಗಳು ಎಷ್ಟು ಮತ್ತು ಯಾವುವು ?

ಈ. ನಿಂತು ಹೋದ ಕೈಗಾರಿಕೆಗಳಿಂದ ಬರಬೇಕಾದ ಸಾಲದ ಮೊತ್ತ ಎಷ್ಟು? ಸಾಲ ಮರುಪಾವತಿಗೆ ಜರುಗಿಸಿದ ಕ್ರಮಗಳೇನು ?